ದಂಡಿನಶಿವರ ಹೋಬಳಿ ರಸ್ತೆಗಳ ಅಭಿವೃದ್ಧಿಗೆ ಅನುದಾನ

ತುರುವೇಕೆರೆ

ತಾಲ್ಲೂಕಿನ ದಂಡಿನಶಿವರ ಹೋಬಳಿಯಲ್ಲಿನ ಎಲ್ಲಾ ರಸ್ತೆಗಳ ಅಭಿವೃದ್ಧಿಗಾಗಿ ಸುಮಾರು 40 ರಿಂದ 50 ಕೋಟಿಗಳ ಅನುದಾನವನ್ನು ತರಲಾಗುತ್ತಿದೆ ಎಂದು ಶಾಸಕ ಎಂ.ಟಿ.ಕೃಷ್ಣಪ್ಪ ತಿಳಿಸಿದರು.

ತಾಲ್ಲೂಕಿನ ದಂಡಿನಶಿವರ ಹೋಬಳಿಯ ಬೀಚನಹಳ್ಳಿ ಗ್ರಾಮದಲ್ಲಿ ನಬಾರ್ಡ್‌ವತಿಯಿಂದ 1 ಕೋಟಿ ಅನುದಾನದಲ್ಲಿ ಮುಂಜೂರಾಗಿರುವ ಬೀಚನಹಳ್ಳಿಯಿಂದ ಗೊಪ್ಪೇನಹಳ್ಳಿಗೇಟ್‌ವರಗಿನ ರಸ್ತೆ ಅಭಿವೃದ್ಧಿ ಕಾಮಗಾರಿಯ ಶಂಕುಸ್ಥಾಪನೆಯನ್ನು ನೆರವೇರಿಸಿ ಮಾತನಾಡಿದರು.

ಸುಮಾರು 15 ವರ್ಷಗಳಿಂದ ದಂಡಿನಶಿವರ ಹೋಬಳಿಯಲ್ಲಿ ಅಭಿವೃದ್ಧಿಯಾಗಿಲ್ಲ ಎಂದು ಹಲವು ಸ್ನೇಹಿತರುಗಳು ಹೇಳಿಕೆ ನೀಡಿದ್ದರು. ತಾಲ್ಲೂಕಿನಲ್ಲಿಯೇ ದಂಡಿನಶಿವರ ಹೋಬಳಿಗೆ ಅತೀ ಹೆಚ್ಚು ಕಾಮಗಾರಿಗಳನ್ನು ನೀಡಿದ್ದು, ಬೀಚನಹಳ್ಳಿಯಿಂದ ತೋವಿನಕೆರೆವರಗೆ, ರಾಮಡಿಹಳ್ಳಿಯಿಂದ ದಂಡಿನಶಿವರವರಗೆ, ಹುಲ್ಲೇಕೆರೆಯಿಂದ ಸಾರಿಗೆಹಳ್ಳಿಯವರಗೆ ಸೇರಿದಂತೆ ಅನೇಕ ಹಳ್ಳಿಗಳನ್ನು ಸಂಪರ್ಕ ಕಲ್ಪಿಸುವ ರಸ್ತೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಯಾವುದೇ ಕೆಲಸ ಕಾರ್ಯಗಳಾಗಬೇಕಿದ್ದರೆ ಮುಕ್ತವಾಗಿ ಬಂದು ಕೇಳಿದರೆ ಮಾಡಿಕೊಡುತ್ತೇನೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಪಂಚಾಯ್ತಿ ಸದಸ್ಯ ಸಿ.ವಿ.ಮಹಾಲಿಂಗಯ್ಯ, ಸ್ವಾಮಿ, ಎಪಿಎಂಸಿ ಸದಸ್ಯ ಲೋಕೇಶ್ ಮುಖಂಡರಾದ ಶಂಕರೇಗೌಡ, ಲೋಕೇಶ್ ಬಾಬು, ರಾಜು, ಬೀಚನಹಳ್ಳಿರಾಮಣ್ಣ, ದೇವರಾಜು, ಪ್ರಕಾಶ್ ಸೇರಿದಂತೆ ಗ್ರಾಮಸ್ಥರು ಇದ್ದರು.

ವಿಜೃಂಭಣೆಯ ವಿಮಾನಗೋಪುರ ಮಹಾಕುಂಭಾಭಿಷೇಕ

ಹುಳಿಯಾರು

ಸಮೀಪದ ಜೋಡಿತಿರುಮಲಾಪುರದಲ್ಲಿ ಪುರಾಣ ಪ್ರಸಿದ್ಧ ಶ್ರೀಪ್ರಸನ್ನ ಆಂಜನೇಯ ಸ್ವಾಮಿಯವರ ದೇವಾಲಯಕ್ಕೆ ನೂತನವಾಗಿ ನಿರ್ಮಿಸಿರುವ ವಿಮಾನಗೋಪುರದ ಮಹಾಕುಂಭಾಭಿಷೇಕ ಹಾಗೂ ನವಗ್ರಹ ಸ್ಥಿರಬಿಂಬ ಪ್ರತಿಷ್ಠಾಪನಾ ಮಹೋತ್ಸವವು ಶುಕ್ರವಾರದಂದು ನಾನಾ ಧಾರ್ಮಿಕ ಕೈಂಕರ್ಯಗಳೊಂದಿಗೆ ವಿಜೃಂಭಣೆಯಿಂದ ನೆರವೇರಿತು.

ಗುರುವಾರ ಹುಳಿಯಾರಿನ ಗ್ರಾಮದೇವತೆ ದುರ್ಗಮ್ಮ,ಹೊಸಳ್ಳಿಯ ಕೊಲ್ಲಾಪುರದಮ್ಮ,ಹೊಸಳ್ಳಿಪಾಳ್ಯದ ಅಂತರಘಟ್ಟೆ ಅಮ್ಮನವರ ಆಗಮನದೊಂದಿಗೆ ಕಳಶಾಸ್ಥಾಪನೆ,ಸಹಸ್ರಮೋದಕ ಮಹಾಗಣಪತಿಹೋಮ ಕಲಶಾರ್ಚನೆ,ರಾಕ್ಷೋಘ್ನ ಹೋಮ ನಡೆಯಿತು. ಸಮಾರಂಭಕ್ಕೆ ಆಗಮಿಸಿದ ಆಂಧ್ರಪ್ರದೇಶ ಕರ್ನೂಲ್ ಜಿಲ್ಲೆಯ ಆಧವಾನಿ ಮಠಾಧೀಶರಾದ ಶ್ರೀ ಸುಬ್ರಹ್ಮಣ್ಯ ಮಹಾಸ್ವಾಮಿಗಳನ್ನು ವೇದಘೋಷ ಹಾಗೂ ಪೂರ್ಣಕುಂಭದೊಂದಿಗೆ ಸ್ವಾಗತಿಸಲಾಯಿತು.

ಶುಕ್ರವಾರ ಬೆಳಿಗ್ಗೆ ಋತ್ವಿಜರಿಂದ ಮೂಲದೇವರಿಗೆ ಮಹನ್ಯಾಸ ಪೂರ್ವಕ ರುದ್ರಾಭಿಷೇಕ, ಆಂಜನೇಯ ಮೂಲಮಂತ್ರ ಹೋಮ,ಷೋಡಶ ಕಲಾ ಹೋಮಗಳು ನಡೆದು ಮಂಗಳವಾದ್ಯದ ಹಿಮ್ಮೇಳದಲ್ಲಿ ಸಾಂಪ್ರದಾಯಿಕವಾಗಿ ಕಳಸ ಹೊತ್ತು ಗ್ರಾಮಸ್ಥರ ಹರ್ಷೋದ್ಗಾರದೊಂದಿಗೆ ವಿಮಾನಗೋಪುರದ ಮಹಾಕುಂಭಾಭಿಷೇಕ ನಡೆಯಿತು. ತೀರ್ಥಪ್ರಸಾದದ ನಂತರ ಆಗಮಿಸಿದ ಭಕ್ತಾದಿಗಳಿಗೆ ಅನ್ನಸಂತರ್ಪಣೆ ನಡೆಯಿತು.

ದೇವಾಲಯದ ಅಧ್ಯಕ್ಷ ಟಿ.ಎಸ್.ಮಂಜುನಾಥ್ ,ಶಂಕರ ಶಾಸ್ತ್ರಿ ಟಿ.ಕೆ.ಮಂಜುನಾಥ್, ರಾಘವೇಂದ್ರ,ರಾಜಣ್ಣ,ತಿರುಮಲಾಪುರ ಗ್ರಾಪಂ ಅಧ್ಯಕ್ಷ ನಂದಿಹಳ್ಳಿ ದೇವರಾಜು, ರಾಜಣ್ಣ,ನಿಂಗರಾಜು ಮತ್ತಿತರರು ಸೇರಿದಂತೆ ಹುಳಿಯಾರು,ಹೊಸಳ್ಳಿ,ಪಾಳ್ಯ ಸೇರಿದಂತೆ ಸುತ್ತಲಿನ ಗ್ರಾಮಸ್ಥರು ಕಾರ್ಯಕ್ರಮದಲ್ಲಿ ಭಾಗವಹಿಸಿ ದೇವರಿಗೆ ಪೂಜೆ ಸಲ್ಲಿಸಿ ಪ್ರಸಾದ ಸ್ವೀಕರಿಸಿದರು.

ನ್ಯಾಯೋಚಿತ ಜೀವನದಿಂದ ಗ್ರಾಮಗಳಲ್ಲಿ ನೆಮ್ಮದಿ ಸಾಧ್ಯ

ತುಮಕೂರು

ಮನುಷ್ಯ ಶಾಂತಿ ಯಿಂದ ಜೀವನ ನಡೆಸಬೇಕಾದರೆ ಆತ್ಮಸಾಕ್ಷಿಗೆ ವಿರುದ್ಧವಾಗಿ ನಡೆಯಬಾರದು ನ್ಯಾಯೋಚಿತ ಜೀವನದಿಂದ ಅತ್ಮಶಾಂತಿಯ ಜೋತೆ ಗ್ರಾಮದಲ್ಲೂ ನೆಮ್ಮದಿ ನೆಲೆಯಾಗುತ್ತದೇ ಸಮಾಜದಲ್ಲಿ ನಾವು ಬದುಕುವುದು ಎಷ್ಟು ಮುಖ್ಯವೋ ಇತರರೊಂದಿಗೆ ಹೊಂದಾಣಿಕೆಯ ಜೀವನ ಅವಶ್ಯ ಎಂದು ಬೆಲಗೂರು ಶ್ರೀ ವಿರಪ್ರತಾಪ ಆಂಜನೇಯ ಶ್ರೀ ಮಠದ ಅವಧೂತಶ್ರೀಗಳಾದ ಶ್ರೀಶ್ರೀ ಬಿಂಧೂಮಾದವಶರ್ಮಸ್ವಾಮೀಜಿ ತಿಳಿಸಿದರು

ತಾಲ್ಲೂಕಿನ ಹಾಲ್ಕುರಿ ಗ್ರಾಮದಲ್ಲಿ ಏರ್ಪಡಿಸಿದ್ದ ಶ್ರೀ ಪ್ರಸನ್ನ ಆಂಜೀನೇಯಸ್ವಾಮಿ ದೇವಾಲಯದ ಪುನರ್ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ದಿವ್ಯ ಸಾನ್ನಿಧ್ಯ ವಹಿಸಿದ ಅವರು ಎಲ್ಲರೂ ಭಕ್ತಿ ಮಾರ್ಗ ಅನುಸರಿಸುವ ಮೂಲಕ ದೀಪ ಹಚ್ಚುವ ಕೆಲಸ ಮಾಡಬೇಕಿದೆ. ಭಕ್ತಿಯಿಂದ ಶ್ರೀ ಆಂಜೀನೇಯನನ್ನು ಪ್ರರ್ಥಿಸಿದರೆ ಸಂಕಷ್ಟ ದೂರವಾಗುತ್ತದೆ ಮನುಷ್ಯ ಸಂಕಷ್ಟಬಂದಾಗ ಧೃತಿಗೆಡಬೇಕಾಗಿಲ್ಲ , ಅಧುನಿಕತೆಯಿಂದ ಮನುಷ್ಯ ಜೀವನದಲ್ಲಿ ಶಾಂತಿ ಕಳೆದುಕೊಳ್ಳುತ್ತಿದ್ದು ಭಾರತ ನೆಲದಲ್ಲಿ ಆಸುಹೊಕ್ಕಾಗಿರುವ ಧರ್ಮಾಚರಣೆಗಳಿಂದ ಮಾನಸಿಕ ಶಾಂತಿ ಪಡೆಯಲು ಸಾಧ್ಯ ಧರ್ಮ ಮತ್ತು ದೇವರು ಮನುಷ್ಯನ ಜೀವನದಲ್ಲಿ ಅಗಾಧವಾಗಿ ಪರಿಣಾಮ ಬೀರಿದ್ದು, ಧರ್ಮದಲ್ಲಿನ ಅಂಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಅವಶ್ಯಕತೆಯಿದೆ. ಇಂದಿನ ಯುವಪೀಳಿಗೆಗೆ ಧರ್ಮ ಮತ್ತು ದೇವರ ಬಗ್ಗೆ ಏಕಾಗ್ರತೆಯ ಅರಿವು ಕಡಿಮೆಯಾಗುತ್ತಿದ್ದು, ಧ್ಯಾನ, ಯೋಗದಿಂದ ಆತ್ಮದ ದೇವರನ್ನು ಕಂಡು ಸಂಸ್ಕಾರವಂತರಾಗಬೇಕು ಗ್ರಾಮದಲ್ಲಿ ತ್ರಿಕಾಲ ಪೂಜೆ ಪುರಸ್ಕಾರಗಳು ನಡೆದರೆ ಉತ್ತಮ ಮಳೆಯಾಗುತ್ತದೆ ಈ ಬಾರಿ ಮನುಷ್ಯ ಸೇರಿದಂತೆ ಜೀವಸಂಕುಲದ ನೀರಿನ ಬವಣೆ ನೀಗುತ್ತದೆ ಎಂದರು ಬೆಂಗಳೂರಿನ ನಾಗರಾಜ್ ಶರ್ಮರವರ ನೇತೃತ್ವದಲ್ಲಿ ವಿವಿಧ ಹೋಮಗಳು, ಅಭಿಷೇಕ ನಡೆದವು

ಕಾರ್ಯಕ್ರಮದಲ್ಲಿ ಮಾಜಿ ಶಾಸಕರಾದ ಬಿ,ಸಿ ನಾಗೇಶ್,ಸಮಾಜ ಸೇವಕ ಕೆ.ಟಿ ಶಾಂತಕುಮಾರ್. ದೇವಾಲಯದ ಧರ್ಮದರ್ಶಿಗಳಾದ ಹೆಚ್ .ಪಿ,ಲಕ್ಷೀನಾರಯಣ್ ,ಹೆಚ್ ಎಸ್ ಅರವಿಂದ್ ,ಚಂದ್ರಶೇಖರಯ್ಯ, ಗುರುಮೂರ್ತಿ ಭಾಗವಹಿಸಿ ಪೂಜೆ ಸಲ್ಲಿಸಿದರು.

ಉಚಿತ ನೋಟ್ ಪುಸ್ತಕ ವಿತರಣೆ

ಹುಳಿಯಾರು

ಅರೆ ಅಲೆಮಾರಿ ಸಮುದಾಯಕ್ಕೆ ಸೇರಿದ ಕಾಡುಗೊಲ್ಲ ಜನಾಂಗದ ಮಕ್ಕಳು ವಿದ್ಯಾವಂತರಾಗಿ,ಆರ್ಥಿಕವಾಗಿ ಅಭಿವೃದ್ಧಿ ಹೊಂದುವಂತೆ ರಾಜ್ಯ ಕಾಡುಗೊಲ್ಲ ಯುವಸೇನೆ ಉಪಾಧ್ಯಕ್ಷ ಮಲ್ಲಿಕಾರ್ಜುನ್ ರಾಮಪ್ಪನಹಟ್ಟಿ ಹೇಳಿದರು.

ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಶೆಟ್ಟಿಕೆರೆ ಹೋಬಳಿಯ ಬಾಣದೇವರಹಟ್ಟಿ, ಕಂದಿಕೆರೆ ಹೋಬಳಿಯ ಕೆಂಪರಾಯನಹಟ್ಟಿ, ಹುಳಿಯಾರು ಹೋಬಳಿ ಹೊಯ್ಸಳಕಟ್ಟೆಯ ತಿಮ್ಮಪ್ಪನಹಟ್ಟಿಯ ಶಾಲಾ ಮಕ್ಕಳಿಗೆ ಉಚಿತ ನೋಟ್ ಪುಸ್ತಕ ಹಾಗೂ ಬರವಣಿಗೆ ಅಗತ್ಯವಿರುವ ಸಾಮಾಗ್ರಿಗಳ ವಿತರಣೆ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಗ್ರಾಮೀಣ ಭಾಗದ ಸರ್ಕಾರಿ ಶಾಲೆಗಳಲ್ಲಿ ಹಿಂದುಳಿದ ಹಾಗೂ ಅಲೆಮಾರಿ ಸಮುದಾಯದ ಮಕ್ಕಳು ಮಾತ್ರ ಓದುತ್ತಿದ್ದಾರೆ. ಹಳ್ಳಿಯಲ್ಲಿ ಬರಗಾಲ ಆವರಿಸಿರುವುದರಿಂದ ಆರ್ಥಿಕ ಮಟ್ಟಕುಸಿದಿರುವ ಕಾರಣ, ಬಡವರು ಹಾಗೂ ಕೂಲಿ ಕಾರ್ಮಿಕರು ತಮ್ಮ ಮಕ್ಕಳಿಗೆ ಸೂಕ್ತ ಶಿಕ್ಷಣ ಕೊಡಿಸಲು ಸಾಧ್ಯವಾಗುತ್ತಿಲ್ಲ, ಇದರಿಂದ ಸಮುದಾಯದ ಮಕ್ಕಳಿಗೆ ತುಂಬಲಾರದ ನಷ್ಟಉಂಟಾಗಿದೆ ಎಂದು ಎಚ್ಚರಿಸಿದರು.

ಚಿಕ್ಕನಾಯಕನಹಳ್ಳಿ ಘಟಕದ ಅಧ್ಯಕ್ಷ ಮಂಜು ಕೆಂಪರಾಯನಹಟ್ಟಿ ಮಾತನಾಡಿ, ಪೋಷಕರು ಎಷ್ಟೇ ಕಷ್ಟ ಇದ್ದರೂ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಿ, ಉತ್ತಮ ಶಿಕ್ಷಣ ಕೊಡಿಸುವ ಮೂಲಕ ಸಮಾಜದ ಮುಖ್ಯವಾಹಿನಿಗೆ ತರಬೇಕು ಎಂದು ಸಲಹೆ ನೀಡಿದರು.

ನಗರ ಪ್ರದೇಶದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಯುವಕರು ತಮ್ಮ ದುಡಿಮೆಯಲ್ಲಿ ಅಲ್ಪ ಭಾಗದ ಹಣವನ್ನು ಯುವಸೇನೆ ಮುಖಾಂತರ ಸಮುದಾಯದ ಮಕ್ಕಳ ವಿದ್ಯಾಭ್ಯಾಸಕ್ಕೆ ವ್ಯಯಿಸುತ್ತಿದ್ದಾರೆ. ಇದು ಶೈಕ್ಷಣಿಕವಾಗಿ ಹಿಂದುಳಿದಿರುವ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗಲಿದೆ ಎಂದರು.

ಚಿಕ್ಕನಾಯಕನಹಳ್ಳಿ ಘಟಕದ ಕಾರ್ಯಾಧ್ಯಕ್ಷ ವಿಶ್ವನಾಥ್, ಉಪಾಧ್ಯಕ್ಷ ಕಾಂತರಾಜು, ಮುಖಂಡರಾದ ಸುಧಾಕರ್, ದೇವರಾಜುಕೆ. ಸಿ.ಬಿ.ಪಿಶಿವಕುಮಾರ್, ಶಾಂತಕುಮಾರ್, ಬಸವರಾಜು, ತಿಮ್ಮೇಗೌಡ, ದಿನೇಶ್, ದಿಲೀಪ್, ಧರಣೇಶ್, ಗುರು, ಕುಮಾರ ರಾಮ್, ಮಧು, ಮನು, ದಯಾನಂದ್, ಮಹಾಲಿಂಗಯ್ಯ, ಮೋಹನ್‌ಕುಮಾರ್, ಮಂಜುನಾಥ್ ಪೊಲೀಸ್, ಶೇಷಾದ್ರಿ, ರಮೇಶ್ ರಣಕಳೆ, ಬಸವರಾಜು ಇತರರು ಇದ್ದರು.



ವಿದ್ಯಾರ್ಥಿಯ ವಿದ್ಯಾಭ್ಯಾಸಕ್ಕೆ ನೆರವು ನೀಡಲಿ

ಮಾನ್ಯರೆ,

ತುಮಕೂರು ಜಿಲ್ಲೆ ಶಿರಾ ತಾಲ್ಲೂಕಿನ ಹುಲಿಕುಂಟೆ ಹೋಬಳಿಗೆ ಸೇರಿದ ಕೆ.ಕೆ.ಪಾಳ್ಯದ ನಿವಾಸಿ ಶಿವಕುಮಾರ್ ಮತ್ತು ಸಾಕಮ್ಮನವರ ಮಗನಾದ ಕೆ.ಎಸ್.ಮಂಜುನಾಥ್ ಎಂಬ ವಿದ್ಯಾರ್ಥಿ ಚಳ್ಳಕೆರೆ ತಾಲ್ಲೂಕು ಬಿ.ಎಸ್.ಎಸ್. ಪ್ರೌಢಶಾಲೆಯ ಕನ್ನಡ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಮಾಡಿ ಎಸ್.ಎಸ್.ಎಲ್.ಸಿ.ಯಲ್ಲಿ 537 ಅಂಕಗಳೊಂದಿಗೆ ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಪ್ರಥಮ ಮತ್ತು ದ್ವಿತೀಯ ಪಿಯುಸಿಯನ್ನು ತುಮಕೂರಿನ ಕುಣಿಗಲ್ ರಸ್ತೆಯಲ್ಲಿರುವ ಬಿಸಿಎಂ ಸರ್ಕಾರಿ ವಸತಿ ನಿಲಯದಲ್ಲಿ ಇದ್ದು ಬನಶಂಕರಿಯ ಎಸ್ .ವಿ.ಎಸ್. ಕಾಲೇಜಿನಲ್ಲಿ ವಿಜ್ಞಾನ ವಿಭಾಗದಲ್ಲಿ ವ್ಯಾಸಂಗ ಮಾಡಿ ದ್ವಿತೀಯ ಪಿಯುಸಿಯಲ್ಲಿ 483 ಅಂಕಗಳೊಂದಿಗೆ ಉತ್ತೀರ್ಣನಾಗಿದ್ದು, ಮುಂದಿನ ವಿದ್ಯಾಭ್ಯಾಸಕ್ಕೆ ಬಡತನ ಅಡ್ಡಿಯಾದ ಕಾರಣ ಮುಂದಿನ ವಿದ್ಯಾಭ್ಯಾಸ ಮಾಡಬೇಕೆಂಬ ಆಸೆ ಇದ್ದರೂ ಸಹ ಹಣಕಾಸಿನ ತೊಂದರೆ ಈತನಿಗೆ ಎದುರಾಗಿದೆ. ಈತ ತನ್ನ ವಿದ್ಯಾಭ್ಯಾಸಕ್ಕಾಗಿ ಬಟವಾಡಿಯಲ್ಲಿರುವ ಹೋಟೆಲ್ ವೊಂದರಲ್ಲಿ ಸರ್ವರ್ ಆಗಿ ಕೆಲಸ ಮಾಡುತ್ತಿದ್ದಾನೆ. ಆದ್ದರಿಂದ ಇಂತಹ ಉತ್ತಮ ವಿದ್ಯಾರ್ಥಿಯ ವಿದ್ಯಾಭ್ಯಾಸಕ್ಕೆ ತಣ್ಣೀರೆರಚದೆ ಆತನ ವಿದ್ಯಾಭ್ಯಾಸಕ್ಕೆ ಸರ್ಕಾರ ಮುಂದಾದರೆ ನಿಜಕ್ಕೂ ಒಳ್ಳೆಯ ವಿದ್ಯಾರ್ಥಿಯಾಗಿ ಹೊರಹೊಮ್ಮುತ್ತಾನೆ. ದಯವಿಟ್ಟು ಈತನಿಗೆ ಸಹಾಯ ನೀಡಬೇಕೆಂದು ಈ ಮೂಲಕ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

■ -ಕೆ.ಎಂ.ಶಿವಕುಮಾರ್ (ಆಟೋ ಯಡಿಯೂರಪ್ಪ), ತುಮಕೂರು.

ಎಂ.ಜಿ.ರಸ್ತೆಯಲ್ಲಿ ವಾಹನಗಳ ಅಡ್ಡಾದಿಡ್ಡಿ ನಿಲುಗಡೆ

ಮಾನ್ಯರೆ,

ತುಮಕೂರು ನಗರದ ಎಂ.ಜಿ. ರಸ್ತೆಗೆ ಇದ್ದ ಗೌರವ ಇತ್ತೀಚೆಗೆ ಮರೆಯಾಗುತ್ತಿದೆ. ರಸ್ತೆಯನ್ನೇನೋ ಅಗಲೀಕರಣ ಮಾಡಲಾಯಿತು. ಆದರೆ ಆ ರಸ್ತೆಯನ್ನೇ ಈಗ ನುಂಗಲಾಗಿದೆ. ರಸ್ತೆಯ ಬದಿಯಲ್ಲಿ ವಾಹನಗಳು ನಿಂತಿರುತ್ತವೆ. ದ್ವಿಚಕ್ರ ವಾಹನಗಳು, ಕಾರುಗಳು ಎಲ್ಲೆಂದರಲ್ಲಿ ಪಾರ್ಕ್ ಮಾಡಲಾಗಿರುತ್ತದೆ. ಇವುಗಳ ನಿಲುಗಡೆಗೆ ಒಂದು ಸುವ್ಯವಸ್ಥಿತ ಯೋಜನೆ ಇಲ್ಲ. ಯಾರು ಎಲ್ಲಿ ಹೇಗೆ ಬೇಕಾದರೂ ನಿಲುಗಡೆ ಮಾಡಬಹುದು. ಪ್ರಶ್ನೆ ಮಾಡಲು ಹೋದರೆ ಅವರನ್ನೇ ದಬಾಯಿಸುತ್ತಾರೆ. ಇನ್ನು ಫುಟ್‌ಪಾತ್ ಅಂತೂ ಸಾರ್ವಜನಿಕರ ಬಳಕೆಗೆ ಸಿಗುತ್ತಿಲ್ಲ. ರಸ್ತೆಯ ಎರಡೂ ಕಡೆ ಫುಟ್ಪಪಾತ್‌ನ್ನು ಅಂಗಡಿಗಳವರು ಅತಿಕ್ರಮಿಸಿಕೊಂಡಿದ್ದಾರೆ. ಇರುವ ಕೆಲವೊಂದು ಜಾಗಗಳನ್ನು ಬೀದಿ ವ್ಯಾಪಾರಿಗಳು ತಮ್ಮದಾಗಿಸಿಕೊಂಡಿದ್ದಾರೆ. ಹೀಗಾಗಿ ಸಾರ್ವಜನಿಕ ಉಪಯೋಗಕ್ಕೆ ಇರುವ ಫುಟ್‌ಪಾತ್ ಸಹ ಇಲ್ಲದಂತಾಗಿದೆ. ಎರಡೂ ಕಡೆ ಎದುರುಬದಿರಾಗಿ ಜನ ಓಡಾಡುತ್ತಿರುವಾಗ ಪರಸ್ಪರ ತಾಕಿ ಜಗಳವಾಡುವ, ಹೆಂಗಸರು, ಗಂಡಸರ ಮೇಲೆ ಜಗಳಕ್ಕೆ ನಿಲ್ಲುವ ಪ್ರಸಂಗಗಳು ಹೆಚ್ಚಾಗಿ ಕಂಡುಬರುತ್ತವೆ. ರಸ್ತೆಯವರೆಗೂ ಚಾಚಿಕೊಂಡಿರುವ ಅಂಗಡಿಗಳವರ ವಿರುದ್ಧ ನಗರ ಪಾಲಿಕೆ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಯಾವಾಗಲೂ ಒಮ್ಮೆ ಅತ್ತ ಗಮನ ಹರಿಸಿ ಸುಮ್ಮನಾಗುತ್ತಾರೆ. ಇನ್ನು ಪೊಲೀಸರಂತೂ ಇವರನ್ನು ಕ್ಯಾರೆ ಎನ್ನುವುದಿಲ್ಲ. ಮುಖ್ಯವಾಗಿ ಜನದಟ್ಟಣೆ ಇರುವ ಈ ರಸ್ತೆ ಸಾರ್ವಜನಿಕರ ಉಪಯೋಗಕ್ಕೆ ಇರಬೇಕು. ಪ್ರತಿದಿನ ಜನ ಈ ರಸ್ತೆಯಲ್ಲಿ ಓಡಾಡುವಾಗ ಯಾವುದೇ ತೊಂದರೆಗಳು, ಅಡ್ಡಿ ಆತಂಕಗಳು ಇರಬಾರದು. ಆದರೆ ಇಲ್ಲಿ ಅಡ್ಡಿಗಳೇ ಹೆಚ್ಚಾಗಿವೆ. ಸಾರ್ವಜನಿಕ ಉಪಯೋಗಕ್ಕಿಂತ ಅಂಗಡಿ ಮುಂಗಟ್ಟುಗಳವರದೇ ಇಲ್ಲಿ ಕಾರುಬಾರಾಗಿದೆ. ಫುಟ್ ಪಾತ್ ಅನ್ನು ತೆರವುಗೊಳಿಸಿ ಸಾರ್ವಜನಿಕರ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕೆಂದು ಕಳಕಳಿಯ ಮನವಿ.

■ -ಸೂರ್ಯನಾರಾಯಣ, ಕೆ.ಆರ್.ಬಡಾವಣೆ, ತುಮಕೂರು.

ಕೆ.ಎನ್.ರಾಜಣ್ಣನವರಿಗೆ ಸಚಿವ ಸ್ಥಾನ ನೀಡಲಿ

ಮಾನ್ಯರೆ,

ಶಾಸಕರು ಹಾಗೂ ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರೂ ಆದ ಕೆ.ಎನ್.ರಾಜಣ್ಣನವರಿಗೆ ಈ ಬಾರಿಯ ಸಚಿವ ಸಂಪುಟ ವಿಸ್ತರಣೆಯಲ್ಲಿ ಸಚಿವ ಸ್ಥಾನ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯನವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇವೆ. ಡಿಸಿಸಿ ಬ್ಯಾಂಕ್ ವತಿಯಿಂದ ರೈತರಿಗೆ ಸಾಲ ನೀಡಿರುವವರಲ್ಲದೆ, ರೈತರ ಸಾಲ ಮಾಡಿ ಅನೇಕ ರೈತರು ಆತ್ಮಹತ್ಯೆ ಮಾಡಿಕೊಳ್ಳದಂತೆ ರೈತರ ಹಿತಕ್ಕೆ ದುಡಿದಿದ್ದಾರೆ. ಮಧುಗಿರಿ ಕ್ಷೇತ್ರದ ಅಭಿವೃದ್ಧಿಯಲ್ಲೂ ಗಣನೀಯ ಪಾತ್ರ ವಹಿಸುತ್ತಿದ್ದಾರೆ. ಇತಿಹಾಸ ಪ್ರಸಿದ್ಧ ಮಧುಗಿರಿ ಬೆಟ್ಟದ ಅಭಿವೃದ್ಧಿ ಜೊತೆಗೆ ರೋಪ್‌ವೇ ನಿರ್ಮಿಸಿ ದೊಡ್ಡ ಸಾಧನೆ ಮಾಡಿದ್ದಾರೆ. ಇವರು ಒಂದು ಕೋಮಿಗೆ ಮಾತ್ರ ಸೀಮಿತವಾಗಿಲ್ಲ, ಇವರು ಎಲ್ಲಾ ಜಾತಿ, ಜನಾಂಗದವರ ಏಳಿಗೆಗೆ ಶ್ರಮಿಸುತ್ತಿದ್ದಾರೆ. ಅನೇಕ ಮಂದಿಗೆ ಉದ್ಯೋಗಾವಕಾಶ, ಕಾಮಗಾರಿ ಕೆಲಸ, ಬಡವರಿಗೆ ಧನ ಸಹಾಯ ಹೀಗೆ ಎಲ್ಲಾ ರಂಗದಲ್ಲೂ ಜನಾನುರಾಗಿಯಾಗಿದ್ದಾರೆ. ಇಂತಹ ಜನಪ್ರಿಯ ವ್ಯಕ್ತಿಯನ್ನು ಗುರುತಿಸಿ ಸಿದ್ದರಾಮಯ್ಯ ಅವರ ಸಚಿವ ಸಂಪುಟದಲ್ಲಿ ಇವರಿಗೆ ಸ್ಥಾನ ನೀಡಿದ್ದೇ ಆದಲ್ಲಿ ಕಾಂಗ್ರೆಸ್‌ನ ಬಲ ಮತ್ತಷ್ಟು ಹೆಚ್ಚುವುದರಲ್ಲಿ ಸಂಶಯವಿಲ್ಲ. ಈ ನಿಟ್ಟಿನಲ್ಲಿ ಕಾಂಗ್ರೆಸ್‌ನ ಹೈಕಮಾಂಡ್‌ನವರು ಶಾಸಕ ರಾಜಣ್ಣನವರ ಜನಪ್ರಿಯ ಸೇವೆಗಳನ್ನು ಗುರುತಿಸಿ ಅವರಿಗೆ ಸಚಿವ ಸಂಪುಟದಲ್ಲಿ ಅವಕಾಶ ನೀಡಬೇಕಾಗಿ ಈ ಮೂಲಕ ಮನವಿ ಮಾಡಿಕೊಳ್ಳುತ್ತಿದ್ದೇನೆ.

■ -ಕೇಶವಮೂರ್ತಿ, ಕಾಂಗ್ರೆಸ್ ಮುಖಂಡ, ಹೊಳವನಹಳ್ಳಿ, ಕೊರಟಗೆರೆ ತಾ.

ಭ್ರಷ್ಟತೆ ವಿರುದ್ಧ ಹೋರಾಡಬೇಕು

ಮಾನ್ಯರೆ,

ಸಮಾಜದಲ್ಲಿ ಬೇರೂರುತ್ತಿರುವ ಭ್ರಷ್ಟತೆಯನ್ನು ಕಿತ್ತು ಹಾಕಲು ವಿದ್ಯಾರ್ಥಿ ಸಮುದಾಯಕ್ಕೆ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆಯವರು ಕಿವಿಮಾತು ಹೇಳಿರುವ ವಿಷಯವನ್ನು ಪತ್ರಿಕೆಗಳಲ್ಲಿ ಓದಿ ಬಹಳ ಸಂತೋಷವಾಯಿತು. ವಿದ್ಯಾರ್ಥಿಗಳೇ ಸಮಾಜದ ಬದಲಾವಣೆಗೆ ಮೂಲ ಕಾರಣಕರ್ತರು. ಅವರು ಮನಸ್ಸು ಮಾಡಿದರೆ ಈ ದೇಶವನ್ನು ಉತ್ತಮ ಸ್ಥಿತಿಗೆ ಕೊಂಡೊಯ್ಯಬಹುದು ಎಂಬುದು ಸಂತೋಷ್ ಹೆಗ್ಡೆ ಸೇರಿದಂತೆ ಹಲವು ಮಹನೀಯರ ಅಭಿಪ್ರಾಯ. ಆದರೆ ಇಂತಹ ಮಹನೀಯರು ಬಂದು ಭಾಷಣ ಮಾಡಿ ಹೋಗುತ್ತಾರೆ. ಅವರ ಮಾತುಗಳನ್ನು ಪಾಲಿಸುವವರು ಎಷ್ಟು ಮಂದಿ ಇದ್ದಾರೆ? ನಮ್ಮ ಸಮಾಜದಲ್ಲಿ ದಿನೇ ದಿನೇ ಭ್ರಷ್ಟರು ಹೆಚ್ಚುತ್ತಿರುವಾಗ ಭ್ರಷ್ಟತೆ ವಿರುದ್ಧ ಹೋರಾಡುವ ನೈತಿಕ ಸ್ಥೈರ್ಯ ಯುವ ಪೀಳಿಗೆಗೆ ಬೇಕಾಗುತ್ತದೆ. ನಮ್ಮ ರಾಜಕೀಯ ವ್ಯವಸ್ಥೆಯನ್ನು ನೋಡಿದಾಗ ರಾಜಕೀಯದಲ್ಲಿ ಬಹುಪಾಲು ಭ್ರಷ್ಟರೇ ಸೇರಿಕೊಂಡಿದ್ದಾರೆ. ನಮ್ಮ ಅಧಿಕಾರಿ ಮತ್ತು ನೌಕರ ವರ್ಗ ರಾಜಕಾರಣಿಗಳನ್ನು ಭ್ರಷ್ಟರನ್ನಾಗಿ ಮಾಡುತ್ತಾರೆ. ಇದೇ ವರ್ಗ ಸರ್ಕಾರದ ಹಣ ತಿಂದು ಜನಸಾಮಾನ್ಯರು ನೀಡುವ ತೆರಿಗೆಯಿಂದ ಜೀವನ ಮಾಡುತ್ತಾ ಹಣವನ್ನು ದುಂದು ವೆಚ್ಚ ಮಾಡುತ್ತಾರೆ. ಒಟ್ಟಾರೆ ನಮ್ಮ ಸಮಾಜದಲ್ಲಿ ರಾಜಕಾರಣಿಗಳು ಮತ್ತು ಅಧಿಕಾರಿಗಳು ನಮ್ಮ ವ್ಯವಸ್ಥೆಯನ್ನು ಹಾಳು ಮಾಡಿದ್ದಾರೆ. ಸಂತೋಷ್ ಹೆಗ್ಡೆಯವರಂತಹ ದಕ್ಷ ಅಧಿಕಾರಿಗಳು ನಮ್ಮ ಸಮಾಜದಲ್ಲಿ ಹೆಚ್ಚಾಗಿ ಬಂದರೆ ವ್ಯವಸ್ಥೆಯನ್ನು ಸ್ವಲ್ಪ ಮಟ್ಟಿಗೆ ಸರಿದಾರಿಗೆ ತರಬಹುದೇನೋ?

■ -ಮಹದೇವ್, ಬಟವಾಡಿ, ತುಮಕೂರು.

ಜೆ.ಸಿ.ಪುರ - ಸಾಸಲು ಮಾರ್ಗವಾಗಿ ಸಾರಿಗೆ ಸಂಪರ್ಕ ಕಲ್ಪಿಸಲಿ

ಮಾನ್ಯರೆ,

ಚಿಕ್ಕನಾಯಕನಹಳ್ಳಿ ತಾಲ್ಲೂಕು ಜೆ.ಸಿ.ಪುರ, ಬ್ಯಾಡರಹಳ್ಳಿ ಮಾರ್ಗವಾಗಿ ತಿಪಟೂರು ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆ ಬಹಳ ವರ್ಷಗಳಿಂದ ಇದ್ದು, ಈ ಭಾಗದಲ್ಲಿ ಬಸ್ಸುಗಳು ಓಡಾಡುತ್ತಿಲ್ಲ. ಸುಮಾರು 7 ರಿಂದ 10 ಗ್ರಾಮಗಳು ಈ ರಸ್ತೆಯ ವ್ಯಾಪ್ತಿಯಲ್ಲಿ ಬರುತ್ತಿದ್ದು, ಇವರೆಲ್ಲ ದೂರ ನಡೆದಾಡಿಕೊಂಡೇ ಬಸ್ಸುಗಳಿಗೆ ಹೋಗಬೇಕು. ಜೆ.ಸಿ.ಪುರದಿಂದ ಕೆ.ಬಿ.ಕ್ರಾಸ್ ಮೂಲಕ ತಿಪಟೂರಿಗೆ ಅಥವಾ ಚಿ.ನಾ.ಹಳ್ಳಿ ಮೂಲಕ ತಿಪಟೂರಿಗೆ ಹೋಗಬೇಕು. ಇದರ ಬದಲಾಗಿ ಬ್ಯಾಡರಹಳ್ಳಿ, ಅಗಸರಹಳ್ಳಿ, ಸಾಸಲು ಮೂಲಕ ಬಸ್ ಮಾರ್ಗ ಅನುಕೂಲ ಕಲ್ಪಿಸಿದರೆ ಗೋಪಾಲನಹಳ್ಳಿ ಮೂಲಕ ತಿಪಟೂರು ಸೇರಲು ಪ್ರಯಾಣಿಕರಿಗೆ ಅನುಕೂಲವಾಗುತ್ತದೆ. ಸಾಸಲು ಗ್ರಾಮದಿಂದ ಬ್ಯಾಡರಹಳ್ಳಿವರೆಗೆ ಯಾವುದೇ ಬಸ್ ಸೌಲಭ್ಯವಿಲ್ಲ. ಈ ಭಾಗದಲ್ಲಿ ಬರುವ 8 ಗ್ರಾಮಗಳ ಜನತೆ 5 ರಿಂದ 6 ಕಿ.ಮೀ.ವರೆಗೆ ನಡೆದುಕೊಂಡೇ ಹೋಗಬೇಕು. ಅಗಸರಹಳ್ಳಿ, ಬ್ಯಾಡರಹಳ್ಳಿ ಭಾಗದ ಜನತೆ ಚಿ.ನಾ.ಹಳ್ಳಿ ಕೆ.ಬಿ. ಕ್ರಾಸ್ ಮಾರ್ಗದ ವಾಹನಗಳನ್ನು ಅವಲಂಬಿಸಬೇಕು. ಮಾಸ್ತಯ್ಯನಪಾಳ್ಯ, ಸಾಸಲು ಗೊಲ್ಲರಹಟ್ಟಿ, ಗೋಡಗಲ್ಲು ಮುಂತಾದ ಗ್ರಾಮಗಳ ಜನತೆ ಚಿ.ನಾ.ಹಳ್ಳಿ-ತಿಪಟೂರು ಮಾರ್ಗದ ಬಸ್ಸುಗಳನ್ನೇ ಅವಲಂಬಿಸಬೇಕು. ಇದಕ್ಕಾಗಿ 6-7 ಕಿ.ಮೀ. ದೂರ ನಡೆದು ಹೋಗಬೇಕು. ಇಲ್ಲಿ ಯಾವುದೇ ವಾಹನಗಳ ಸಂಚಾರ ಇಲ್ಲದೇ ಇರುವುದರಿಂದ ರೈತರು, ವಿದ್ಯಾರ್ಥಿಗಳು ಹಾಗೂ ವ್ಯಾಪಾರಸ್ಥರಿಗೆ ಹಾಗೂ ಕೂಲಿ ಕಾರ್ಮಿಕರಿಗೆ ತೀವ್ರ ತೊಂದರೆ ಎದುರಾಗಿದೆ. ಅಗಸರಹಳ್ಳಿ, ಮಾಸ್ತಯ್ಯನಪಾಳ್ಯ, ಗೋಡಗಲ್ಲು, ಹುಲಿಕಟ್ಟೆ, ಭಾರೆ, ಸಾಸಲು ಗೊಲ್ಲರಹಟ್ಟಿ, ಪೆಮ್ಮಲದೇವರಹಳ್ಳಿ ಮೊದಲಾದ ಗ್ರಾಮಗಳ ಜನತೆ ಕೃಷಿ ಕಾರ್ಮಿಕರಾಗಿದ್ದು, ಕೆಲವರು ಸಣ್ಣಪುಟ್ಟ ತರಕಾರಿ ಬೆಳೆಯುವವರು ಇದ್ದಾರೆ. ಇವರೆಲ್ಲಾ ಪ್ರತ್ಯೇಕ ಬಾಡಿಗೆ ವಾಹನ ಮಾಡಿಕೊಂಡು ಸಂತೆ ತಲುಪಬೇಕು ಅಥವಾ ಪಟ್ಟಣಗಳಿಗೆ ತೆರಳಬೇಕು. ವಿದ್ಯಾರ್ಥಿಗಳಂತೂ ಒಂದೂವರೆ ಅಥವಾ 2 ಗಂಟೆ ಮುಂಚಿತವಾಗಿ ಬಸ್ ಮಾರ್ಗಗಳಿಗೆ ತೆರಳಬೇಕು. ಕೆಲವೇ ನಿಮಿಷ ಏರುಪೇರಾದರೂ ಒಂದು ಬಸ್ ಮಿಸ್ ಆದರೂ ಮತ್ತೆ ಒಂದು ಗಂಟೆ ಬಸ್ಸಿಗಾಗಿ ಕಾಯಬೇಕಾದ ತೊಂದರೆ ಇದೆ. ಈ ಕಾರಣಕ್ಕಾಗಿ ರಾಜ್ಯ ರಸ್ತೆ ಸಾರಿಗೆ ಅಧಿಕಾರಿಗಳು ಈ ಭಾಗದಲ್ಲಿ ಕನಿಷ್ಠ ದಿನವೊಂದಕ್ಕೆ 3 ಬಸ್ಸುಗಳನ್ನಾದರೂ ಓಡಿಸುವ ಮೂಲಕ ಜನರ ಬವಣೆಗಳನ್ನು ತಪ್ಪಿಸಬೇಕಾಗಿ ಕೋರಿಕೆ.

■ -ಗ್ರಾಮಸ್ಥರು, ಅಗಸರಹಳ್ಳಿ, ಸಾಸಲು ಗೊಲ್ಲರಹಟ್ಟಿ, ಚಿ.ನಾ.ಹಳ್ಳಿ ತಾ.

ಅಹಿಂದ ವರ್ಗಗಳ ಸೇವೆಯನ್ನು ಸರ್ಕಾರ ಗುರುತಿಸುತ್ತಿದೆ

ತುಮಕೂರು

ಇಲ್ಲಿನ ಗುಬ್ಬಿ ವೀರಣ್ಣ ಕಲಾಕ್ಷೇತ್ರದಲ್ಲಿ ವಿಶ್ವ ಸೂಲಗಿತ್ತಿಯವರ ದಿನಾಚರಣೆ ಅಂಗವಾಗಿ ಡಾ।। ಸೂಲಗಿತ್ತಿ ನರಸಮ್ಮನವರ 97 ನೇ ಜನ್ಮ ದಿನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು,

ಅಧ್ಯಕ್ಷತೆಯನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಬಾ.ಹ.ರಮಾಕುಮಾರಿ ವಹಿಸಿದ್ದರು, ಕರ್ನಾಟಕ ಸರ್ಕಾರದ ವೃತ್ತಿ ತರಬೇತಿ ಮತ್ತು ಕೌಶಲ್ಯಾಭಿವೃದ್ಧಿ ನಿಗಮದ ಅಧ್ಯಕ್ಷರಾದ ಮುರಳೀಧರ ಹಾಲಪ್ಪನವರು ಗಿಡವನ್ನು ನೆಡುವ ಮೂಲಕ ಉದ್ಘಾಟಿಸಿ ಮಾತನಾಡುತ್ತಾ ಹೆರಿಗೆ ಮಾಡುವುದು ಸೂಕ್ಷ್ಮವಾದ ಕೌಶಲ್ಯ ಕ್ರಮಬದ್ಧವಾದ ಪಾರಂಪರಿಕ ಹೆರಿಗೆ ತರಬೇತಿಯನ್ನು ನೀಡುವ ಮುಖಾಂತರ ಸಾವಿರಾರು ಮಹಿಳೆಯರಿಗೆ ಈ ಸೂಲಗಿತ್ತಿ ಕಸುಬನ್ನು ಸರ್ಕಾರದಿಂದ ತರಬೇತಿ ನೀಡಬೇಕು. ಎಲ್ಲಾ ಸರ್ಕಾರಿ ಹೆರಿಗೆ ಆಸ್ಪತ್ರೆಗಳಿಗೆ ಡಾ।। ಸೂಲಗಿತ್ತಿ ನರಸಮ್ಮನವರ ಹೆಸರು ನಾಮಕರಣ ಮಾಡಲು ಮಾನ್ಯ ಆರೋಗ್ಯ ಸಚಿವರು ಮತ್ತು ಸಂಬಂಧಪಟ್ಟ ಅಧಿಕಾರಿಗಳ ಬಳಿ ಮಾತನಾಡಿದ್ದೇನೆ ಎಂದರು.

ಹಂಪಿ ಕನ್ನಡ ವಿಶ್ವ ವಿದ್ಯಾಲಯದ ವೈಸ್ ಚಾನ್ಸಲರ್ ಆದ ಡಾ।। ಮಲ್ಲಿಕಾ ಎಸ್. ಘಂಟಿ ಮತ್ತು ತುಮಕೂರಿನ ಸಾಧಕಿ ಶಾಂತಾ ಸನ್ಮತಿಕುಮಾರ್ ರವರಿಗೆ 2017 ನೇ ಸಾಲಿನ ಡಾ।। ಸೂಲಗಿತ್ತಿ ನರಸಮ್ಮ ಸೇವಾ ಪ್ರಶಸ್ತಿಯನ್ನು ಪ್ರಾಧಾನ ಮಾಡಲಾಯಿತು, ಪ್ರಶಸ್ತಿ ಸ್ವೀಕರಿಸಿದ ಡಾ।। ಮಲ್ಲಿಕಾ ಎಸ್.ಘಂಟಿ ರವರು ಮಾತನಾಡುತ್ತಾ ಶ್ರೇಣೀಕೃತ ವ್ಯವಸ್ಥೆ ಅಹಿಂದ ವರ್ಗಗಳ ಮಹಿಳೆಯರ ಸೇವೆಯನ್ನು ಸರ್ಕಾರಗಳು ಈಗೀಗ ಗುರುತಿಸುತ್ತಿವೆ ನರಸಮ್ಮನವರ ಸಾಧನೆ ಕುರಿತು 9 ನೇ ತರಗತಿ ಪಠ್ಯಪುಸ್ತಕದಲ್ಲಿರುವುದು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಉತ್ತಮವಾದ ನೀತಿ ಮತ್ತು ಸಾಧನೆಗೆ ಪ್ರೇರಣೆಯಾಗಿದೆ, ನರಸಮ್ಮನವರು ಸಾವಿರಾರು ಮಹಿಳೆಯರಿಗೆ ಸುಸೂತ್ರ ಹೆರಿಗೆಗಳನ್ನು ಮಾಡಿ ಪಾರಂಪರಿಕ ವೃತ್ತಿಗೆ ಸೊಬಗನ್ನು ನೀಡಿದ್ದಾರೆ, ವಿಭಿನ್ನವಾದ ಸೇವೆಗಳನ್ನು ಮಾಡುವಲ್ಲಿ ಮಹಿಳೆಯರು ಪ್ರಮುಖ ಪಾತ್ರ ವಹಿಸುತ್ತಾರೆ, ಅಂತಹ ಕಾರ್ಯದಲ್ಲಿ ಡಾ।। ಸೂಲಗಿತ್ತಿ ನರಸಮ್ಮನವರದು ಅನನ್ಯಸೇವೆ ಎಂದು ಪ್ರಶಂಸಿಸಿದರು.

ಡಾ।। ಲಕ್ಷ್ಮಣ್‌ದಾಸ್ ಮಾತನಾಡಿ ನರಸಮ್ಮನವರು ಸೂಲಗಿತ್ತಿ ಸೇವೆಯಲ್ಲಿ ನಿಸ್ವಾರ್ಥ ಕರ್ಮಯೋಗಿಯಾಗಿ ಶ್ರಮಿಸಿ ಬಂದಿರುವ ಹಿರಿಯ ಜೀವ. ಗರ್ಭಾವಸ್ಥೆ ಹೆಣ್ಣಿನ ಜೀವಿತದಲ್ಲೇ ಪ್ರಮುಖ ಕಾಲಘಟ್ಟ, ಭಾವನಾತ್ಮಕ ಸಂಘರ್ಷದ ಸನ್ನಿವೇಶವನ್ನು ತಾಯ್ತನದ ಸುಖ ಅನುಭವಿಸುವ ಮುನ್ನ ಆ ತಾಯಿ ಅನುಭವಿಸುವ ಯಾತನೆ ಆಕೆಗಷ್ಟೇ ಗೊತ್ತು ಈ ನೋವನ್ನು ಹಂಚಿಕೊಳ್ಳಲು ಹೆತ್ತ ತಾಯಿಯಷ್ಟೇ ಸಾಂತ್ವನ ನೀಡಿ ಆರೈಕೆ ಮಾಡುವ ಸೂಲಗಿತ್ತಿಯ ಪಾತ್ರ ಪ್ರಮುಖವೆನಿಸುತ್ತದೆ, ಇಂತಹ ತಾಯಂದಿರಿಗೆ ತಾಯಿಯಾಗಿ ಪ್ರಸವ ಮಾಡಿದ ಯಶಸ್ಸು ನರಸಮ್ಮನವರದು ಎಂದರು.

ತುಮಕೂರು ವಿಶ್ವವಿದ್ಯಾಲಯದ ಕುಲಸಚಿವರಾದ ವೆಂಕಟೇಶ್ವರಲು ಕ್ಯಾಲೆಂಡರ್ ಬಿಡುಗಡೆ ಮಾಡಿ ಮಾತನಾಡುತ್ತಾ ಡಾ।। ನರಸಮ್ಮನವರು ಅದೆಷ್ಟು ಸಾವಿರ ತಾಯಂದಿರಿಗೆ ಪ್ರಸವ ಮಾಡಿರುವರೋ ಅದಕ್ಕೆ ಲೆಕ್ಕವಿಲ್ಲ, ಈ ಪವಿತ್ರ ಸೇವೆಗೆ ಯಾವುದೇ ಶುಲ್ಕ, ದೇಣಿಗೆ ನಿರೀಕ್ಷಿಸದೇ ಕಾಯಕ ನಿರ್ವಹಿಸುವರು ಜಾತಿ ಮತಗಳ ಹಂಗು ಮೀರಿದ ಸೇವೆ ಇವರದು. ಅಧಿಕಾರ ಅಂತಸ್ಥಿನ ಭೇದ ಇವರಿಗೆ ತಿಳಿಯದು. ಇವರ ಪಾಲಿಗೆ ಎಲ್ಲರೂ ಸಮಾನರು. ಸಿರಿವಂತರ ಮನೆಯಿರಲಿ, ಪುಟ್ಟಗುಡಿಸಲೇ ಆಗಿರಲಿ ಇವರ ಸೇವೆ ಬಯಸಿ ಬಂದವರಿಗೆ ಅಷ್ಟೇ ಅಕ್ಕರೆಯಿಂದ ಚಳಿ ಮಳೆಯೆನ್ನದೇ ಕರೆ ಬಂದೆಡೆಗೆ ತಲುಪಿ ಯಾತನೆ ಅನುಭವಿಸುವ ತಾಯಿಗೆ ಸಾಂತ್ವನ ನೀಡಿ ಪ್ರಸವ ಕಾರ್ಯದಲ್ಲಿ ತೊಡಗಿದ್ದಾರೆ, ತುಮಕೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ನೀಡಿರುವುದು ವಿಶ್ವವಿದ್ಯಾನಿಲಯಕ್ಕೆ ಘನತೆ ಬಂದಿದೆ.

ವೇದಿಕೆಯಲ್ಲಿ ಸಾಹಿತಿಗಳಾದ ಅನ್ನಪೂರ್ಣ ವೆಂಕಟನಂಜಪ್ಪ, ಶೈಲಾ ನಾಗರಾಜು, ಬಳ್ಳಾರಿ ವೆಂಕಮ್ಮ, ಜಿಲ್ಲಾ ವಕ್ಫ್ ಬೋರ್ಡ್ ಅಧ್ಯಕ್ಷರಾದ ಇಕ್ಬಾಲ್ ಅಹ್ಮದ್, ಪ್ರಜಾಪ್ರಗತಿ ನಾಗಣ್ಣ, ಜಿಲ್ಲಾ ಆರೋಗ್ಯ ಅಧಿಕಾರಿಗಳಾದ ಡಾ।। ರಂಗಸ್ವಾಮಿ, ಡಾ।। ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರಾದ ನಾಗೇಶ್, ಜಿ.ಪಂ. ಸದಸ್ಯರಾದ ಗುಬ್ಬಿ ಜಗನ್ನಾಥ್, ಮುಖಂಡರಾದ ಮಾನಂ ವೆಂಕಟಸ್ವಾಮಿ, ಕುಂದರನಹಳ್ಳಿ ರಮೇಶ್, ಧನಿಯಾಕುಮಾರ್, ಲೇಖಕರಾದ ಸಂಜೀವಯ್ಯ ಮಾಸ್ಟರ್, ಕಾರ್ಮಿಕ ಮುಖಂಡರಾದ ರೇವಣ್ಣಸಿದ್ದಯ್ಯ, ಮಸ್ತಾಕ್ ಅಹಮದ್, ಅಂಬೇಡ್ಕರ್ ಅಭಿವೃದ್ಧಿ ಕೇಂದ್ರದ ಡಾ।। ರಮೇಶ್, ಅಂಬೇಡ್ಕರ್ ಯುವ ಸೇನೆ ಅಧ್ಯಕ್ಷರಾದ ಗಣೇಶ್, ಆಟೋ ಶಿವರಾಜ್, ಸೋರೇಕುಂಟೆ ಯೋಗೀಶ್, ಚಲನಚಿತ್ರ ನಟ ಜೆಟ್ಟಿ ನಾಗರಾಜ್ ಪ್ರೇರಕರ ಸಂಘದ ಅಧ್ಯಕ್ಷ ರಾಜಣ್ಣ, ಕಾಗ್ಗೆರೆ ಸುರೇಶ್, ಗೂಳಹರಿವೆ ನಾಗರಾಜ್ ಇನ್ನೂ ಮುಂತಾದವರು ಹಾಜರಿದ್ದರು.